**ಸಾಕ್ಷಿಗೆ ದಿನಾಂಕಃ 28.03.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಬಿ.ಎಂ.ಎನ್. ವಕೀಲರಿಂದಃ**

ಮೃತ ವಾದಿ ಮತ್ತು ಮೃತ ಬಸಪ್ಪನವರ ಕುಟುಂಬಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಮೃತ ವಾದಿಯು ಎಷ್ಟು ಜನರ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಬದುಕಿರುವುದಿಲ್ಲ. 3 ರಿಂದ 5 ನೇ ಪ್ರತಿವಾದಿಗಳು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಗೊತ್ತು. ದಾವಾ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ಮಾದಯ್ಯನ ಜಮೀನು, ಪಶ್ಚಿಮಕ್ಕೆ ಮಲ್ಲೇಗೌಡರ ಜಮೀನು, ಉತ್ತರಕ್ಕೆ ಅಂಗಡಿ ಚಿಕ್ಕಮಾದ ಜಮೀನು, ದಕ್ಷಿಣಕ್ಕೆ ಲಕ್ಷ್ಮಮ್ಮ ನವರ ಜಮೀನು ಇರುತ್ತದೆ. ದಾವಾ ಸ್ವತ್ತಿನ ಅಕ್ಕಪಕ್ಕ ನನಗೆ ಸೇರಿದ ಜಮೀನು ಇರುತ್ತದೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ 500 ಮೀ. ನಂತರ ನನ್ನ ಜಮೀನು ಬರುತ್ತದೆ. ಮೃತ ಮಾದಯ್ಯ ತೀರಿಕೊಂಡು 10 ವರ್ಷ ಆಗಿರುತ್ತದೆ. ಮೃತ ಮಾದಯ್ಯ ನವರಿಗೆ ಮೂರು ಗಂಡು ಮಕ್ಕಳು ಅವರಲ್ಲಿ ಒಬ್ಬರು ತೀರಿಕೊಂಡಿರುತ್ತಾರೆ ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ. ನನಗೆ ಓದಲು ಬರೆಯಲು ಬರುತ್ತದೆ.

ನಿ.ಡಿ.1 ರ ಪ್ರಕಾರ 1 ನೇ ಪ್ರತಿವಾದಿಗೆ ಸರ್ವೆ ನಂ.151 ರಲ್ಲಿ 5 ಎಕರೆ ಜಮೀನು ಹರಾಜಿನ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಆರ್.ಟಿ.ಸಿ. ಮಾದಯ್ಯನ ಹೆಸರಿನಲ್ಲಿ ಇರುತ್ತದೆ. ನಿ.ಡಿ.6 ರ ಪ್ರಕಾರ ಸರ್ವೆ ನಂ.151/2 ರಲ್ಲಿ 1 ಎಕರೆ 13 ಗುಂಟೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ದಾವಾಸ್ವತ್ತಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.151/1, 151/2, 151/3 ಎ ಗಳನ್ನು 3 ನೇ ಪ್ರತಿವಾದಿಯು ದಿ.05.05.2011 ರಂದು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳು 3 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇಲ್ಲದೆ ಇದ್ದರೂ ಹಾಗೂ ದಾವಾ ವಿಚಾರಗಳು ನನಗೆ ಗೊತ್ತಿಲ್ಲದೆ ಇದ್ದರೂ ವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(3 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**